

ನ್ಯೂರಾನು ಕೋಶಗಳ ಮೇಲೆ ನಿರ್ದಿಷ್ಟ ಪ್ರಮಾಣದ ಬೆಳಕಿನ ಕಿರಣಗಳನ್ನು ಹಾಯಿಸುವುದರ ಮೂಲಕ ಯಶಸ್ವಿಯಾಗಿ ‘ಅಳಿಸಿ’ತಿದ್ದಿದ ಕುತೂಹಲಕಾರಿ ಸಂಶೋಧನೆಯ ಬಗ್ಗೆ ಸಂಪ್ರಬಂಧವೊಂದನ್ನು ‘ನೇಚರ್’ ಪ್ರಕಟಿಸಿದೆ.

ಬರೆಯುತ್ತಾ ಹೋದಂತೆಲ್ಲ ‘ಅಳಿಸುವುದರ’ ಕಥೆ ಹಿಗ್ಗುತ್ತಲೇ ಹೋಗುತ್ತದೆ! ಅಳಿಸುತ್ತಲೇ ಮತ್ತೆ ಬರೆಸುತ್ತ ಪಳಗಿಸುವ, ಜ್ಞಾನ ಬೆಳಗಿಸುವ, ವ್ಯಕ್ತಿತ್ವ ಬೆಳೆಸುವ ವಾಙ್ಮಯ ಲೋಕವನ್ನು ಆವಿರ್ಭವಿಸುವ ಸಾಮರ್ಥ್ಯವಿರುವ ‘ಅಳಿಸುವಿಕೆ’ಯ ಕೌಶಲ ಸಾಬೀತಾಗಿದ್ದರೂ, ಎಲ್ಲವನ್ನೂ ಅಳಿಸಲು ಸಾಧ್ಯವಾಗುವ ಯುಗದಲ್ಲಿ ನಾವಿದ್ದೇವೆನ್ನುವ ಅಹಂಕಾರದ ದರ್ಪ ‘ಅಳಿಸುವುದರ’ ಇನ್ನೊಂದು ಮುಖದಲ್ಲಿದೆ. ಚುನಾವಣೆಗಳಲ್ಲಿ ಬಳಸುವ ಶಾಶ್ವತವಾಗಿ ಉಳಿಯುವ ಇಂಕಿನಂತೆ ಅಳಿಸಬಹುದಾದವುಗಳ ಜೊತೆಜೊತೆಗೆ, ‘ಅಳಿಸಲಾಗದ್ದೂ’ ಇದ್ದರೂ ‘ಟೆಂಪೊರರಿ’ ಸರ್ಕಾರಗಳೇ ಬರುತ್ತಿರುವುದು ವಿಪರ್ಯಾಸ. ಅಳಿಸಬೇಕಾದ್ದೇನನ್ನು ಎಂದು ಅರಿಯುವ ಸಾಮಾನ್ಯ ಜ್ಞಾನ ಇಲ್ಲದೆ ಹೋದುದರ ಅಡ್ಡಪರಿಣಾಮದಿಂದಾಗಿ ಕಾಡುಗಳು, ಬೆಟ್ಟಗಳು, ಖನಿಜಾದಿ ತೈಲ,ಜಲ ಸಂಪತ್ತುಗಳು –ಅಳಿಸಿಹೋಗುತ್ತಿರುವುದು ಮಹಾ ದುರಂತವೇ ಸರಿ. ಮಾನವ ಕುಲವನ್ನೇ ಅಳಿಸಿಹಾಕಬಲ್ಲ ರಕ್ತಪಿಪಾಸು ‘ಹತ್ಯಾರ’ಗಳ ಬಳುವಳಿ ನೀಡಿದ್ದು, ನಾರು, ಬಟ್ಟೆ, ರಬ್ಬರು, ಸ್ಪಂಜುಗಳಂತಹ ‘ಹತ್ತಾರು ಅಳಿಸು-ಸಾಧನ’ಗಳನ್ನು ಆವಿಷ್ಕರಿಸಿದ ಮಾನವನ ಮಿದುಳೇ ಆಗಿರುವಾಗ ಗತಿಯೇನು? ಇಂತಹ ಶಸ್ತ್ರಾಗಾರಗಳ ದುರ್ಬುದ್ಧಿಯೇಕೆ ‘ಅಳಿಸಿ’ಹೋಗುತ್ತಿಲ್ಲ? ಈ ಕುತಂತ್ರಗಳ ಹಿಂದಿರುವ ಕಪಟ ನಾಟಕ ಪಾತ್ರಧಾರಿಗಳ ವಿನಾಶಕಾರಿ ಬುದ್ಧಿಮತ್ತೆಗೇಕೆ ಯಾಕಿನ್ನೂ ‘ಅಲ್ಜಮೀರ್’ ಖಾಯಿಲೆ ಹತ್ತಿಲ್ಲ? ಆಕಾಶದ ನೀಲಿಯೊಟ್ಟಿಗೆ ಚಂದ್ರ ತಾರೆಗಳನ್ನು, ಸಿರಿ ಗಂಧ ಗಾಳಿಯ ಚೆಂದದ ಉದ್ಯಾನವನ್ನು – ಈ ಎಲ್ಲವನ್ನೂ ಸಾರಾಸಗಟಾಗಿ ಮಾಲಿನ್ಯದ ಪ್ಲಾಸ್ಟಿಕ್ ರಬ್ಬರು ಅಳಿಸಿಹಾಕುತ್ತಿರುವಾಗ ಬದುಕಿನ ಬುತ್ತಿಯನು ಸವಿಯಲು ಪ್ರಶಸ್ತ ಸ್ಥಳವೆಲ್ಲಿದೆ...?

ತಪ್ಪುಗಳನ್ನು ಮಾತ್ರವೇ ಅಳಿಸಿ ಒಪ್ಪ ಮಾಡುವ ಮನೋಧರ್ಮ ಬದಲಾಗಿ, ಸರಿಯಿದ್ದರೂ ತಮಗೆ ಒಪ್ಪುತ್ತಿಲ್ಲವೆಂಬ ಸ್ವಹಿತಾಸಕ್ತಿಯ ‘ಕರಿನೆರಳಿನಲ್ಲಿ ‘ಸತ್ವ’ಮತ್ತು ‘ತತ್ವ’ಗಳು ಬಾಡಿಹೋಗುತ್ತಿವೆ ಮತ್ತು, ಇಂತಹ ‘ಎರೇಸರು’ಗಳಿಂದಾಗಿ ಮುಂದಿನ ತಲೆಮಾರಿಗೆ ದಾಟಿಸ ಬೇಕಾದ “ಪ್ರತಿಮೆ”ಗಳು ಅಳಿಸಿಹೋಗುತ್ತಿವೆಯೆಂಬುದು ಬಹುಚರ್ಚಿತ ವಿಷಯವಾಗಿದೆ. ಬೆರಳಿಂದ ಬರೆದುದನ್ನು ಅಳಿಸಲು ಹಿಂದೆಯೇ ಕಲಿತ ಮನುಷ್ಯ, ಬರಬರುತ್ತಾ ಕರುಳಿನಿಂದ ಬರೆದ ಬಾಂಧವ್ಯಗಳನ್ನೂ ಅಳಿಸುವ ಭರಾಟೆಯಲ್ಲಿರುವಾಗ, ಮಾನವೀಯತೆ ಎಂಬುದನ್ನು ಹುಡುಕುವಂತಾಗಿದೆ.

ಈ ಎಲ್ಲ ಆತಂಕ, ತಲ್ಲಣಗಳು ತುಂಬಿರುವ ಈ ಹೊತ್ತು, ‘ಅಳಿಸುವುದು’ ಮಗದೊಮ್ಮೆ ಅರ್ಥಪೂರ್ಣವಾಗಲಿ, ಅಪ್ಯಾಯಮಾನವಾಗಲಿ, ಅಳಿಸಿಹೋದ ಪ್ರೀತಿಯನ್ನು ಆಕರ್ಷಿಸುವ, ಅಳಿದುಹೋದ ಪ್ರಕೃತಿಯನ್ನು ಪೋಷಿಸುವ ಆಚರಣೆಯಾಗಲಿ ಎನ್ನುವ ಅಂತರಂಗದ ಮಾತು ‘ಅಳಿಸದೇ’ ಹೋಗಲಿ. ‘ನನ್ನ ಕೈ ಹಿಡಿದಾಕೆ ಅಳು ನುಂಗಿ ನಗು ಒಮ್ಮೆ ನಾನೂ ನಕ್ಕೇನ...’ ಎನ್ನುವ ಕವಿಭಾವದಂತೆ ನೋವನ್ನು ‘ಅಳಿಸುವ’ ನಗುವಿಗೆ ಪ್ರಾಶಸ್ತ್ಯ ಸಿಗಲಿ. ಪ್ರಾಯಶ್ಚಿತ್ತದ ಒಂದು ಹನಿ ಕಣ್ಣೀರಿಗಿರುವ ‘ಅಳಿಸುವ’ ಶಕ್ತಿ ಅಗಣಿತವಾಗಿ ಮೈದುಂಬಲಿ. ಹರಿದ ಪಾತ್ರಗಳ ಇಕ್ಕೆಲಗಳ ಹಸಿರು ಅಳಿಸಿಹಾಕುತ್ತಿರುವ ಕ್ಷಾಮಡಾಮರದ ಬೇಗುದಿ ಆರುವಂತೆ ಜೀವ ನದಿಗಳು ಪುನಃಚೇತನಗೊಂಡು ಮನೆ-ಮನಗಳು ನಳನಳಿಸಲಿ. ಅಂಕೆಶಂಕೆಗಳಿಲ್ಲದೆ ಅಳಿಸಿಹಾಕುವ ನಿರ್ನಾಮದ ಕ್ಷೋಭೆ ಕೊನೆಗೊಂಡು, ನವ ನಿರ್ಮಾಣದ ಪರಂಪರೆಗೆ ವಿಧ್ಯುಕ್ತ ಚಾಲನೆ ದೊರೆಯಲಿ.

●